**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 18.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2, 3, 10 ಮತ್ತು 11 ನೇ ಪ್ರತಿವಾದಿ ಪರ ಶ್ರೀ.ಆರ್ ಜಿ ಕೆ ವಕೀಲರಿಂದಃ**

3. ಪ್ರಸ್ತುತ ದಾವೆಯ ವಾದಪತ್ರದಲ್ಲಿ ನಾವು ಹಿಂದೆ ಸಲ್ಲಿಸಿದ ದಾವೆಯ ಬಗ್ಗೆ ಹಾಗೂ ಅದರಲ್ಲಿ ರಾಜೀಯಾದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನನ್ನ ತಾಯಿ ಖಾಯಂ ತರೀಕವಾಗಿ ಹುಬ್ಬಳ್ಳಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಅಸಲು ದಾವಾ ನಂ.309/1988 ರಲ್ಲಿ ಆದ ರಾಜೀ ಡಿಕ್ರಿ ಪ್ರಕಾರ ನನ್ನ ತಾಯಿಯ ಸಹೋದರಿ ನಾಗವ್ವ ಈಕೆಗೂ ಸಹ ಹಿಸ್ಸೆ ಕೊಟ್ಟಿದ್ದರು ಎಂದರೆ ಸರಿ. ಸದರಿ ನಾಗವ್ವ ತನಗೆ ಬಂದ ಪ್ಲಾಟುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರಿಂದ 3 ತಮ್ಮ ಹಿಸ್ಸೆಗೆ ಬಂದ ಪ್ಲಾಟ್‌ಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರಿಂದ 3 ತಮ್ಮ ಹಿಸ್ಸೆಗೆ ಬಂದ ಪ್ಲಾಟ್‌ಗಳನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಹೂವಿನ ಶಿಗ್ಲಿಯಲ್ಲಿ ಆಸ್ತಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.1 ರಿಂದ 3 ಶಿಗ್ಲಿಯಲ್ಲಿ ಆಸ್ತಿ ಖರೀದಿಸಿದ ನಂತರ ಅವರೇ ಅದರ ವಹಿವಾಟಿಯಲ್ಲಿದ್ದಾರೆ ಎಂದರೆ ಸಾಕ್ಷಿ ರಾಜೀ ಡಿಕ್ರಿಯ ಮುಂಚೆಯೇ ಸದರಿ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ರಿಂದ 3 ಮಾತ್ರ ಶಿಗ್ಲಿಯಲ್ಲಿರುವ ಆಸ್ತಿಯಲ್ಲಿ ವಹಿವಾಟಿ ಮಾಡಿಕೊಂಡು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಹೂವಿನ ಶಿಗ್ಲಿಯಲ್ಲಿರುವ ಆಸ್ತಿಗಳನ್ನು ಪ್ರತಿವಾದಿ ನಂ.1 ರಿಂದ 3 ರಾಜೀ ಡಿಕ್ರಿಯಲ್ಲಿ ತಮ್ಮ ಹಿಸ್ಸೆಗೆ ಬಂದ ಅಸ್ತಿಗಳನ್ನು ಮಾರಾಟ ಮಾಡಿ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ.

4. ಸರ್ವೆ ನಂ.197 ರಲ್ಲಿ ಯಾವುದೇ ಪ್ಲಾಟ್‌ಗಳು ಉಳಿದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.197 ರಲ್ಲಿ ಹನಮಪ್ಪನ ಗುಡಿ ಇದೆ. ಹನುಮಪ್ಪನ ಗುಡಿಯಲ್ಲಿ ಹೆಣ್ಣು ಮಕ್ಕಳು ಪೂಜೆ ಮಾಡಲು ಬರುವುದಿಲ್ಲ ಹಾಗೂ ಅದನ್ನು ಗಂಡು ಮಕ್ಕಳೇ ಮಾಡುತ್ತಾರೆ ಎಂದರೆ ಸರಿ. ಸರ್ವೆ ನಂ.750/1 ಇದು ಹನುಮಪ್ಪ ದೇವರ ಪೂಜೆಗೆ ಎಂದು ಕೊಟ್ಟ ಆಸ್ತಿ ಎಂದರೆ ಸರಿ. ಸದರಿ ಆಸ್ತಿ ನನ್ನ ಅಜ್ಜನಿಗೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.750/1 ಇದು ನನ್ನ ಅಜ್ಜನಿಗೆ ಅಂದರೆ ನನ್ನ ತಾಯಿಯ ತಂದೆಯ ತಂದೆಯ ಆಸ್ತಿ ಆಗಿರುತ್ತದೆ. ಸದರಿ ಆಸ್ತಿ ನನ್ನ ತಾಯಿಯ ಅಜ್ಜನಿಗೆ ಹೇಗೆ ಬಂದಿತು ಎಂದು ನನ್ನ ತಾಯಿಗೆ ಹಾಗೂ ನನಗೆ ಇಬ್ಬರಿಗೂ ಗೊತ್ತಿಲ್ಲ. ಸದರಿ ಆಸ್ತಿಯ ದಾಖಲೆಗಳನ್ನು ಸಹ ನಾವು ಪರಿಶೀಲಿಸಿಲ್ಲ. ಸರ್ವೆ ನಂ.750/1 ಒಟ್ಟು ಕ್ಷೇತ್ರ 1 ಎಕರೆ 28 ಗುಂಟೆ ಇದೆ. ಅದರ ಕ್ಷೇತ್ರ 3 ಎಕರೆ 17 ಗುಂಟೆ ಇದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಎರಡು ಭಾಗ ಆಗಿ ನಮ್ಮ ಅಜ್ಜ ಭೀಮಪ್ಪನಿಗೆ ಒಂದು ಭಾಗ ಹಾಗೂ ಅವರ ಸಹೋದರ ರಾಮಪ್ಪನಿಗೆ ಒಂದು ಭಾಗ ಹೋಗಿರುತ್ತದೆ. ನನ್ನ ತಾಂಜಿ ಅಸಲು ದಾವಾ ನಂ.309/1988 ರಲ್ಲಿ ಆಗಲೆ ಹಿಸ್ಸೆ ಪಡೆದುಕೊಂಡ ಕಾರಣ ದಾವಾ ಆಸ್ತಿಯಲ್ಲಿ ಅವರಿಗೆ ಯಾವುದೇ ಹಿಸ್ಸೆ ಬರುವುದಿಲ್ಲ ಎಂದರೆ ಸರಿಯಲ್ಲ.

5. ಪ್ರತಿವಾದಿ ನಂ.1 ತಮ್ಮ ಮನೆತನದ ಆಸ್ತಿ ಬಗ್ಗೆ ಒಂದು ಕೌಟುಂಬಿಕ ವ್ಯವಸ್ಥಾ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಹಾಗೂ ನನ್ನ ತಾಯಿಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ. ನಿಪಿ.5 ದಾಖಲೆ ಪ್ರಕಾರ ಪ್ರತಿವಾದಿ ನಂ.1 ರಿಂದ 3 ಆಸ್ತಿಗಳನ್ನು ಪಾಲು ಮಾಡಿಕೊಂಡು ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಸದರಿ ದಾಖಲೆ 2000 ನೇ ಇಸ್ವಿಯಲ್ಲಿ ಆಗಿರುತ್ತದೆ ಎಂದರೆ

ನನಗೆ ಗೊತ್ತಿಲ್ಲ. ನಿಪಿ.7 ದಾಖಲೆಯ ಬಗ್ಗೆ 2000 ನೇ ಇಸ್ವಿಯಲ್ಲಿ ನನ್ನ ತಾಯಿಗೆ ಏನೂ ತಿಳಿಸಿರಲಿಲ್ಲ. ಈ ದಾವೆ ಸಲ್ಲಿಸುವಾಗ ನಿಪಿ.5 ಮತ್ತು 7 ದಾಖಲೆಗಳನ್ನು ನನ್ನ ತಾಯಿಯೇ ಹಾಜರಪಡಿಸಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಜೀವಂತವಿದ್ದಾಗಲೇ ನಾನು ಸದರಿ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಿಪಿ.5 ಮತ್ತು 7 ದಾಖಲೆಗಳ ಬಗ್ಗೆ ಪ್ರಸ್ತುತ ದಾವೆಯಲ್ಲಿ ನಾನು ಪರಿಹಾರ ಕೇಳಿಲ್ಲ ಎಂದರೆ ಸರಿ.

6. ಸರ್ವೆ ನಂ.176 ರಲ್ಲಿ 17 ಎಕರೆ 10 ಗುಂಟೆ ರಲ್ಲಿ 4 ಎಕರೆ 20 ಗುಂಟೆ ಜಮೀನನ್ನು ಪ್ರತಿವಾದಿ ನಂ.1 ಇವರು ಪ್ರತಿವಾದಿ ನಂ.12 ಮತ್ತು 13 ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ನಿಪಿ.27 ಖರೀದಿ ಪತ್ರ 2008 ರಲ್ಲಿ ಆಗಿರುತ್ತದೆ ಎಂದರೆ ಸರಿ.

7. ಸರ್ವೆ ನಂ.199/1 ರಲ್ಲಿ 3 ಎಕರೆ ಜಮೀನನ್ನು ಪ್ರತಿವಾದಿ ನಂ.1 ಈತನು ತನ್ನ ಹೆಂಡತಿಗೆ ಭಕ್ಷಿಶ್ ಮಾಡಿರುತ್ತಾರೆ ಎಂಂದು ಹೇಳಿ ಸಾಕ್ಷಿ ಸದರಿ ಭಕ್ಷಿಶ್ ಪತ್ರವನ್ನು ತೋರಿಸಲಾಗಿ ಸಾಕ್ಷಿ ಆ ಬಗ್ಗೆ ನನ್ನ ತಾಯಿಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿ ನಂ.1 ಇವರ ಹೆಂಡತಿ ಕಮಲವ್ವ ಈಕೆಯನ್ನು ಏಕೆ ಈ ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಮೊದಲು ಎಲ್ಲ ಆಸ್ತಿಗಳು ನನ್ನ ಅಜ್ಜನ ಹೆಸರಿನಲ್ಲಿದ್ದವು ನಂತರ ಸದರಿ ಸಂಗತಿ ಗೊತ್ತಾದ ಕಾರಣ ದಾವೆಯಲ್ಲಿ ಅವರಿಗೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.199 ಪ್ರತಿವಾದಿ ನಂ.3 ಈತನು ತನ್ನ ಮಗನಿಗೆ ಭಕ್ಷಿಶ್ ಮಾಡಿರುತ್ತಾರೆ ಎಂದು ಹೇಳಿ ಸಾಕ್ಷಿ ಸದರಿ ಭಕ್ಷಿಶ್ ಪತ್ರದ ಬಗ್ಗೆ ನನ್ನ ತಾಯಿಗೆ ತಿಳಿಸಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಭಕ್ಷಿಶ್ ಪತ್ರಗಳು ಈ ದಾವೆ

ಸಲ್ಲಿಸುವ ಪೂರ್ವದಲ್ಲಿ ಆಗಿರುತ್ತವೆ ಎಂದರೆ ಸಾಕ್ಷಿ ಸದರಿ ಭಕ್ಷಿಶ್ ಪತ್ರ ಮಾಡುವಾಗ ನಮಗೆ ತಿಳಿಸಿರಲಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.10 ಮತ್ತು 11 ಇವರಿಗೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡುವ ಸಮಯದಲ್ಲಿ ಅವರ ಹೆಸರಿಗೆ ಆದ ಭಕ್ಷಿಶ್ ಪತ್ರಗಳ ಬಗ್ಗೆ ಈ ದಾವೆಯಲ್ಲಿ ಪರಿಹಾರ ಕೇಳಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

8. ದಾವಾ ಶೆಡ್ಯೂಲ್ ಸರ್ವೆ ನಂ.204, 205 ಮತ್ತು 206 ಆಸ್ತಿಗಳು ನಮ್ಮ ಅಜ್ಜನ ಆಸ್ತಿಗಳಾಗಿರುತ್ತವೆ. ಪ್ರತಿವಾದಿ ನಂ.1 ರಿಂದ 3 ಇವರಿಗೆ ಈ ಆಸ್ತಿಗಳು ನಮ್ಮ ಅಜ್ಜನ ಕಡೆಯಿಂದ ಬಂದಿರುತ್ತವೆ. ಸದರಿ ಆಸ್ತಿಗಳು ಯಾವ ರೀತಿ ನನ್ನ ಅಜ್ಜನಿಗೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ಭಕ್ಷಿಶ್ ಪತ್ರ ಆಗಿದೆ ಎಂದು ಹೇಳಿ ನಾನು ಪ್ರತಿವಾದಿ ನಂ.10 ಮತ್ತು 11 ಇವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದರೂ ಸಹ ಸದರಿ ಭಕ್ಷಿಶ್ ಪತ್ರಗಳ ಬಗ್ಗೆ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿ.

9. ಹೂವಿನ ಶಿಗ್ಲಿ ಗ್ರಾಮದ ವಿಪಿಸಿ ನಂ.122/1 ಹಾಗೂ 122/2 ಹೇಗೆ ಬಂದಿರುತ್ತವೆ ಎಂದರೆ ಸಾಕ್ಷಿ ನನ್ನ ಅಜ್ಜನ ಆಸ್ತಿಯಲ್ಲಿಯೇ ಸದರಿ ಮನೆಗಳನ್ನು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಿಪಿಸಿ ನಂ.122/1 ಮತ್ತು 122/2 ಆಸ್ತಿಗಳನ್ನು ಯಾವಾಗ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅಸಲು ದಾವಾ ನಂ309/1988 ರಲ್ಲಿ ನನ್ನ ತಾಯಿ ಹಿಸ್ಸೆ ಪಡೆದುಕೊಂಡಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ತಾಯಿ ಒಂದೇ ಆಸ್ತಿಯಲ್ಲಿ ಹಿಸ್ಸೆ ಪಡೆದುಕೊಂಡಿರುತ್ತಾರೆ ಹಾಗೂ ಬೇರೆ ಆಸ್ತಿಯಲ್ಲಿ ಹಿಸ್ಸೆ ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಒಂದೇ ಆಸ್ತಿಯ ಬಗ್ಗೆ ನನ್ನ ತಾಯಿ ರಾಜೀ

ಮಾಡಿಕೊಂಡಿರುತ್ತಾರೆ ಎಂದು ಹೇಳಿ ಈ ದಾವೆಯ ವಾದಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ.

(**ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟಿ ಸವಾಲಿಗೆ ಶ್ರೀ ಆರ್ ಜಿ ಕೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**